Alleged Grant of Bus Permits direct by Government.

Q.—153. **Sri T. RAMACHAR** (Kolar District—General).—

Will the Government be pleased to state:—

(*a*) the names of persons who have been given bus permits directly by them from 1st January 1951, up-to-date;

(*b*) the dates on which such applications were received and the date of the order sanctioning the same?

A.—**The Hon'ble Sri T. MARIAPPA** (Home Minister).—

(*a*) Nil.

(*b*) Does not arise.

ಶ್ರೀ ಟಿ. ರಾಮಾಚಾರ್‌ರವರು.—(*a*) ಪ್ರಶ್ನೆಗೆ ಉತ್ತರವಾಗಿ ಯಾರಿಗೂ ಸರ್ಕಾರದವರು ಪರ್ಮಿಟ್ ಕೊಟ್ಟಿಲ್ಲವೆಂದು ಹೇಳಿದ್ದೀರಿ. ಟ್ರಾಫಿಕ್ ಬೋರ್ಡಿನವರು ಯಾರಿಗಾದರೂ ಕೊಟ್ಟಿದ್ದಾರೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಟಿ. ರಾಮಾಚಾರ್‌ರವರು.—ಟ್ರಾಫಿಕ್‌ಬೋರ್ಡಿನವರು ಸರ್ಕಾರದವರ ಶಿಫಾರಸ್ಸಿಲ್ಲದೆ ಕೊಡುತ್ತಾರೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇರಬಹುದು. ಸರ್ಕಾರದವರೇ ಬೇರೆ, ಟ್ರಾಫಿಕ್ ಬೋರ್ಡಿನವರೇ ಬೇರೆ.

ಶ್ರೀ ಟಿ. ರಾಮಾಚಾರ್‌ರವರು.—ಹಾಗಾದರೆ ಸರ್ಕಾರದವರೇನೂ ನೇರವಾಗಿ ಯಾರಿಗೂ ಕೊಟ್ಟಿಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ.

ಶ್ರೀ ಟಿ. ರಾಮಾಚಾರ್‌ರವರು.—ಸರ್ಕಾರದವರಿಗೆ ಈ ವಿಚಾರದಲ್ಲಿ ಅಧಿಕಾರವಿದೆಯೆಂದು ತಾವು ಮೊನ್ನೆ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಹೇಳಲಿಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈ ವಿಚಾರದಲ್ಲಿ ಟ್ರಾಫಿಕ್ ಬೋರ್ಡಿನವರಿಗೆ ಅಧಿಕಾರವಿದೆಯೆಂದು ಹೇಳಿದೆ.

ಶ್ರೀ ಟಿ. ರಾಮಾಚಾರ್‌ರವರು.—ಟ್ರಾಫಿಕ್ ಬೋರ್ಡಿನ ಥೇರ್ಮನ್ನರೇನಾದರೂ ಈ ಪರ್ಮಿಟ್ಟುಗಳನ್ನು ಕೊಟ್ಟಿದ್ದಾರೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್. ಇಲ್ಲಿ ಕೊಟ್ಟಿರುವ ಉತ್ತರ ಜನವರಿಯಿಂದ ಪ್ರಶ್ನೆಯವರೆಗೆ ಮಾತ್ರ ಸಂಬಂಧಿಸಿದ್ದು.

ಶ್ರೀ ಟಿ. ರಾಮಾಚಾರ್‌ರವರು.—(*b*) ನೆಯ ಪ್ರಶ್ನೆಗೆ ಉತ್ತರದಲ್ಲಿ 'doesn't arise' ಎಂದು ಹೇಳಿದ್ದೀರಿ. ಅಂದರೆ ಅರ್ಜಿಗಳು ಯಾವುವೂ ಬಂದಿರಲಿಲ್ಲವೆಂದೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೇರವಾಗಿ ಸರ್ಕಾರಕ್ಕೆ ಕೊಟ್ಟಿರತಕ್ಕ ಅರ್ಜಿ ಯಾವುದೂ ಇಲ್ಲ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು (ಮೈಸೂರು ಜಿಲ್ಲೆ).—ಈ ಬಸ್ ಪರ್ಮಿಟ್ಟುಗಳ ವಿಷಯದಲ್ಲಿ ಸರ್ಕಾರದವರು ಪುನರ್‌ವಿಮರ್ಶೆ ಮಾಡಿ ಆಮೇಲೆ ಬೋರ್ಡಿನವರನ್ನು ಅದನ್ನು ರ್ಯಾಟಿಫೈ ಮಾಡಬೇಕೆಂದು ಕೇಳಿರುವುದುಂಟೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಾವು ಪ್ರಶ್ನೆಯನ್ನು ಸ್ವಲ್ಪ ತಿರುಗಿಸಿಹಾಕುತ್ತಿದ್ದೀರಿ. ಟ್ರಾಫಿಕ್ ಬೋರ್ಡಿನವರು ಕೊಟ್ಟಿದ್ದನ್ನು ಸರ್ಕಾರದವರು ರ್ಯಾಟಿಫೈ ಮಾಡಬೇಕೆಂದಿದೆಯೇ ಹೊರತು, ಸರ್ಕಾರದವರು ಮಾಡಿದ್ದನ್ನು ಬೋರ್ಡಿನವರು ರ್ಯಾಟಿಫೈ ಮಾಡಬೇಕಾಗಿಲ್ಲ.

Transfer of right of running Buses by Bus permit holders.

Q.—155. **Sri T. RAMACHAR** (Kolar District—General).—

Will the Government be pleased to state:—

(*a*) the names of bus permit holders who are not actually running the buses themselves;

(*b*) whether they intend taking any action against such bus permit holders who have transferred their right to other valuable consideration?

A.—**The Hon'ble Sri T. MARIAPPA** (Home Minister).—

(*a*) Nil.

(*b*) Action will be taken if such cases are brought to notice.

ಶ್ರೀ ಟಿ. ರಾಮಾಚಾರ್‌ರವರು.—ಬಸ್ ಪರ್ಮಿಟ್ ಹೋಲ್ಡರುಗಳು ಕೆಲವರು ತಾವೇ ಅವುಗಳನ್ನು ನಡೆಸುತ್ತಿಲ್ಲವೆಂದು ಹೇಳುತ್ತೇನೆ. ನೀವು ಈ ಪ್ರಶ್ನೆಯನ್ನು ಎಲ್ಲಾ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರುಗಳಿಗೂ ಕಳುಹಿಸಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಮ್ಮ ಪ್ರಶ್ನೆ ಸರಿಯಾಗಿ ಅರ್ಥವಾಗಲಿಲ್ಲ. ಪರ್ಮಿಟ್ ಹೋಲ್ಡರುಗಳಾರೂ ಬಸ್ಸುಗಳನ್ನು ಡ್ರೈವ್ ಮಾಡುತ್ತಿಲ್ಲ.

ಶ್ರೀ ಟಿ. ರಾಮಾಚಾರ್‌ರವರು.—ನಾನು 'running the bus' ಎಂದು ಹೇಳಿರುವುದರ ಅರ್ಥ 'driving' ಎಂದಲ್ಲ. ತಾವೇ ಅದರ ಮೇಲ್ವಿಚಾರಣೆ ನಡೆಸುವುದು ಎಂಬರ್ಥದಲ್ಲಿ ಹೇಳಿದ್ದೇನೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬಸ್ಸುಗಳನ್ನು ತಾವೇ ನಡೆಸುವುದಾದರೂ ಆಗಬಹುದು, ಅದರ ಮ್ಯಾನೇಜ್‌ಮೆಂಟ್ ನೋಡಿಕೊಳ್ಳುವುದಾದರೂ ಆಗಬಹುದು. ಆ ಅಭಿಪ್ರಾಯದಿಂದ ಇಲ್ಲಿ ಉತ್ತರಕೊಟ್ಟಿದೆ

ಶ್ರೀ ಟಿ. ರಾಮಾಚಾರ್‌ರವರು.—ಪರ್ಮಿಟ್ ಹೋಲ್ಡರುಗಳು ಯಾರಾದರೂ ಬೇರೆಯವರಿಗೆ ತಮ್ಮ ಪರ್ಮಿಟ್ಟನ್ನುಕೊಟ್ಟಿದ್ದರೆ ಅಂಥವರಿಗೆ ಶಿಕ್ಷೆಮಾಡಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಾಗೆ ಬೇರೆಯವರಿಗೆ ಬೇನಾಮಿಯಾಗಿ ಕೊಟ್ಟಿದ್ದರೆ ಅಂಥವರಿಗೆ ಶಿಕ್ಷೆಮಾಡುತ್ತೇವೆ.

ಶ್ರೀ ಎಂ. ಗೋವಿಂದರೆಡ್ಡಿಯವರು (ಚಿತ್ರದುರ್ಗ ಜಿಲ್ಲೆ).—ಹಾಗೆ ಬೇರೆಯವರಿಗೆ ಮಾರಿದ್ದಾರೆಯೇ ಇಲ್ಲವೇ ಎಂಬುದನ್ನು ಕಂಡುಹಿಡಿಯುವುದಕ್ಕೇನಾದರೂ ತಾವು ಸ್ಪೆಷಲ್ ಸಿಬ್ಬಂದಿಯನ್ನಿಟ್ಟಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆಂಟಿ ಕರಪ್ಷನ್ ಬ್ಯೂರೋಯವರನ್ನೂ ಇದಕ್ಕೆ ಉಪಯೋಗಿಸಿಕೊಂಡಿದೆ ಮತ್ತು ಪೋಲೀಸ್ ಏಜೆನ್ಸಿಮೂಲಕ ನಮಗೆ ವರದಿಯಾಗುತ್ತದೆ. ಅದರ ಮೇರೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಮೂಲಕ ಪಾರ್ಟಿಗಳನ್ನು ವಿಚಾರಣೆ ನಡೆಸುತ್ತೇವೆ.